## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಸಿ.ಜೆ.ಎಂ., ನ್ಯಾಯಾಲಯ, ಚಿಕ್ಕಮಗಳೂರು.

<u>ಸಿ.ಸಿ.1344/2021</u>

| | | | |
|---|---|---|---|
| ಸಾಕ್ಷಿದಾರರ ಹೆಸರು | : | ತೇಜಸ್ವಿ ಟಿ.ಐ | ಪಿ.ಡಬ್ಲ್ಯೂ.9 |
| ತಂದೆಯ ಹೆಸರು | : | ಇಂದ್ರೇಶ್ ಟಿ.ಡಿ | ಸಿ.ಡಬ್ಲ್ಯೂ.13 |
| ವಯಸ್ಸು | : | 36 ವರ್ಷ | |
| ವೃತ್ತಿ | : | ಪಿ.ಎಸ್.ಐ, ಕಾಪು ಪೊಲೀಸ್ ಠಾಣೆ | |
| ವಾಸ | : | ಕಾಪು, ಉಡುಪಿ ಜಿಲ್ಲೆ | |

<u>ದಿನಾಂಕಃ 09-06-2026 ರಂದು ಪ್ರಮಾಣ ವಚನ ಭೋದಿಸಲಾಯಿತು.</u>

<u>ಮುಖ್ಯ ವಿಚಾರಣೆಃ ಅಭಿಯೋಜನೆ ಪರ ಮಾನ್ಯ ಎಪಿಪಿ ರವರಿಂದಃ-</u>

ನಾನು ನವೆಂಬರ್ 2019 ರಿಂದ ಜನವರಿ 2021 ರವರೆಗೆ ಚಿಕ್ಕಮಗಳೂರು ನಗರ ಪೊಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸುತ್ತೇನೆ.

ದಿಃ14.10.2020 ರಂದು ಈ ಪ್ರಕರಣದ ಕಡತವನ್ನು ಚಾಸಾ-12 ರವರಿಂದ ಮುಂದಿನ ತನಿಖೆಗಾಗಿ ಪಡೆದಿರುತ್ತೇನೆ. ನಂತರ ಈ ಪ್ರಕರಣದಲ್ಲಿ ವಶಪಡಿಸಿಕೊಂಡ 30 ಗ್ರಾಂ ಗಾಂಜಾವನ್ನು ಇನ್‌ವೆಂಟರಿ ನಂತರ ನಮ್ಮ ಠಾಣೆಯಲ್ಲಿ ಇಟ್ಟಿದ್ದು ಅದನ್ನು ಚಾಸಾ-7 ರವರ ಮೂಲಕ ರಾಸಾಯನಿಕ ಪರೀಕ್ಷೆಗಾಗಿ ಅದೇ ದಿನ ಮನವಿ ಪತ್ರದೊಂದಿಗೆ ಬೆಂಗಳೂರು ಎಫ್.ಎಸ್.ಎಲ್ ಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ಮನವಿ ಪತ್ರವನ್ನು ನೋಡುತ್ತಿದ್ದು ಅದನ್ನು

ಈಗಾಗಲೇ ನಿಪಿ-17 ಎಂದು ಗುರುತಿಸಲಾಗಿದ್ದು ನನ್ನ ಸಹಿ ನಿಪಿ-17(ಎ) ಇರುತ್ತದೆ. ಸದರಿ ದಿನ ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿಕೊಟ್ಟ ಗಾಂಜಾವನ್ನು ಈ ದಿನ ನ್ಯಾಯಾಲಯದ ಮುಂದೆ ನೋಡಿ ಗುರುತಿಸುತ್ತೇನೆ. ಅದನ್ನು ಈಗಾಗಲೇ ಮು.ಮಾ.2 ಎಂದು ಗುರುತಿಸಲಾಗಿರುತ್ತದೆ.

<u>ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ-</u>

ನಾನು ಚಾಸಾ-7 ರವರ ಮೂಲಕ ಮು.ಮಾ.2 ನ್ನು ರಾಸಾಯನಿಕ ಪರೀಕ್ಷೆಗಾಗಿ ಕಳುಹಿಸಿಕೊಟ್ಟಿರುತ್ತೇನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇಲ್ಲಾ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು)
ಓಃಹೇಃಕೇಃಸಃಇಃಎಃಒಃ

ಸಹಿ/-
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಸಿ.ಜೆ.ಎಂ.,ಚಿಕ್ಕಮಗಳೂರು.

ಎಸ್‌ಆರ್ಃ